# ಡುಂಡುಂಡುಂ



■ ಸ. ರಘುನಾಥ
ಕಲೆ: ಸಂತೋಷ್ ಸಸಿಹಿತ್ಲು

ಒಂದು ಕಾಡಿತ್ತಂತೆ. ಆ ಕಾಡಿನಲ್ಲಿ ಒಂದು ದೊಡ್ಡ ಆಲದಮರ ಇತ್ತಂತೆ. ಮರದ ತುಂಬ ಕೆಂಪು ಕೆಂಪು ಹಣ್ಣುಗಳಂತೆ. ಹೊಟ್ಟೆ ಹಸಿದಿದ್ದ ಕೋತಿಯೊಂದು ಅಲ್ಲಿಗೆ ಬಂತಂತೆ. ಹಣ್ಣುಗಳನ್ನ ನೋಡಿ ಅದರ ಹೊಟ್ಟೆ ಹಸಿವು ಜಾಸ್ತಿ ಆಯ್ತಂತೆ. ಚಕಚಕಾಂತ ಮರ ಹತ್ತಿ, ಗಬಗಬಾಂತ ಹಣ್ಣುಗಳನ್ನ ಕಚ್ಚಿಕಚ್ಚಿ ತಿಂತಂತೆ. ಹೊಟ್ಟೆ ತುಂಬಿ ಡರ್ರ್ ಡರ‍್ರಂತ ತೇಗು ಬಂತಂತೆ. ಆಗ ಅದರ ಚೇಷ್ಟೆ ಶುರುವಾಯ್ತಂತೆ.

ಕೊಂಬೆಯಿಂದ ಕೊಂಬೆಗೆ ನೆಗೆಯೋದು, ಹಣ್ಣುಗಳನ್ನ ಕಚ್ಚಿಕಚ್ಚಿ ಎಸೆಯೋದು, ತನ್ನಷ್ಟಕ್ಕೆ ತಾನೇ ಕಿಚಕಿಚಾಂತ ಅರಚೋದು ಮಾಡ್ತಾ ಮಾಡ್ತಾ ಏನ್ಮಾಡ್ತಂತೆ ಗೊತ್ತ?

ಏನ್ಮಾಡ್ತಂತೆ?

ಕೊಂಬೆಯಿಂದ ನೆಲಕ್ಕೆ ನೆಗೀತಂತೆ. ನೆಗೆದು ಕುಣೀತ ಕುಣೀತಾ ಎಲ್ಲೆಂದರಲ್ಲಿ, ಹೇಗಂದರೆ ಹಾಗೆ ಕುಣಿದಿದ್ದೇ ಕುಣಿದಿದ್ದಂತೆ. ಹಾಗೆ ಕುಣೀತಿರೊವಾಗ ಒಂದು ಮುಳ್ಳು ಕಾಲಿಗೆ ಚಕ್ಕಂತ ಚುಚ್ಚಿತಂತೆ. ಅದರ ಕೈಲಿ ಮುಳ್ಳನ್ನ ತೆಗೆಯೋಕಾಗಲಿಲ್ವಂತೆ. ಕುಂಟುತ ಕುಂಟುತ, ಅಳುತ ಅಳುತ ಹೋಗ್ತಿರುವಾಗ ದಾರೀಲಿ ಮಚ್ಚು, ಕತ್ತಿ, ಕುಡುಗೋಲು ಮಾರೋನೊಬ್ಬ ಹೋಗೋದನ್ನ ನೋಡ್ತಂತೆ. ಅವನ ಹತ್ತಿರ ಹೋಗಿ, ಮುಳ್ಳು ತೆಗೀ ಅಂತ ಬೇಡಿಕೊಂತಂತೆ. ಅವನು ಕತ್ತಿಯಿಂದ ಮುಳ್ಳನ್ನ ತೆಗೆದು, ಎಷ್ಟು ದೊಡ್ಡ ಮುಳ್ಳು ನೋಡು ಎಂದು ತೋರಿಸಿದನಂತೆ. ತುಂಬ ಉಪಕಾರವಾಯ್ತು ಅಂತ ಹೇಳಿದ ಕೋತಿ ಏನ್ಮಾಡ್ತಂತೆ ಗೊತ್ತ?

ಏನ್ಮಾಡ್ತಂತೆ?

ಅವನು ಮುಳ್ಳು ತೆಗೆದು ಕತ್ತೀನ ಪಕ್ಕಕ್ಕಿಟ್ಟಿದ್ನಲ್ಲ, ಅದನ್ನ ಎತ್ತಿಕೊಂಡು ಓಡೋಯ್ತಂತೆ. ಅವನು ಅಯ್ಯೋ ಕತ್ತಿ ಹೋಯ್ತಲ್ಲ ಅಂತ ಬೇಜಾರು ಮಾಡಿಕೊಂಡು ಸಂತೆ ದಾರಿ ಹಿಡಿದನಂತೆ.

ಕೋತಿ ಕತ್ತೀನ ಏನ್ಮಾಡ್ತಂತೆ?

ಅದು ಕತ್ತೀನ ಎತ್ತಿಕೊಂಡು ಓಡ್ತ ಓಡ್ತಾ 'ಮುಳ್ಳು ಹೋಯ್ತು ಕತ್ತಿ ಬಂತು ಡುಂ ಡುಂ' ಅಂತ ಹಾಡ್ತಾ ಹೋಗ್ತಿತಂತೆ. ದಾರಿ ಪಕ್ಕ ತೆಂಗಿನ ತೋಟದಲ್ಲಿ ತೋಟದವನು ಬರೀ ಕೈಲಿ ಕಾಯಿ ಸುಲೀತಿದ್ದನಂತೆ. ಆಗ ಕೋತಿ, ಕತ್ತಿ ಕೊಡ್ತೀನ್ ಕಾಯಿ ಸುಲಿ ಎಂದು ಕತ್ತಿ ಕೊಟ್ಟಿತಂತೆ. ಅವನು ಕಾಯಿ ಸುಲಿತಿದ್ದಾಗ ಕೋತಿ, ಒಂದಿಷ್ಟು ಗರಿಗಳನ್ನ ಬಾಚಿಕೊಂಡು ಓಡ್ತಾ ಓಡ್ತಾ ಹಾಡಿತಂತೆ.

ಏನಂತ?

ಮುಳ್ಳು ಹೋಯ್ತು ಕತ್ತಿ ಬಂತು ಡುಂಡುಂ
ಕತ್ತಿ ಹೋಯ್ತು ಗರಿ ಬಂತು ಡುಂಡುಂ

ಹೀಗೆ ಹಾಡ್ತಾ ಹೋಗ್ತಾ ಇರೊವಾಗ ಒಂದು ಆಲೆಮನೆ ಸಿಕ್ಕಿತಂತೆ. ಬೆಲ್ಲ ಮಾಡ್ತಿದ್ದವನೊಬ್ಬ ಬೆಲ್ಲದಚ್ಚುಗಳನ್ನ ನೆಲದ ಮೇಲೆ ಜೋಡಿಸ್ತಿದ್ದನಂತೆ. ಅದನ್ನು ನೋಡಿ ಕೋತಿ ತೆಂಗಿನ ಗರಿಗಳನ್ನ ಕೊಡ್ತೀನಿ ತಗೊ ಅಂತ ಕೊಟ್ಟಿತಂತೆ. ಅವನು ತೆಂಗಿನ ಗರಿಗಳನ್ನ ಹಾಸಿ, ಜೋಡಿಸುತ್ತಿದ್ದಾಗ ಕೋತಿ ಒಂದು ಅಚ್ಚು ಬೆಲ್ಲ ಎತ್ತಿಕೊಂಡು ಓಡ್ತಾ ಓಡ್ತಾ...

ಮುಳ್ಳು ಹೋಯ್ತು ಕತ್ತಿ ಬಂತು ಡುಂಡುಂ
ಕತ್ತಿ ಹೋಯ್ತು ಗರಿ ಬಂತು ಡುಂಡುಂ
ಗರಿ ಹೋಯ್ತು ಬೆಲ್ಲ ಬಂತು ಡುಂಡುಂ

ಎಂದು ಹಾಡ್ತ ಹೋಗ್ತ ಹೋಗ್ತ...

ಬೆಲ್ಲಾನ ತಿಂದುಬಿಡ್ತಂತ?

ಇಲ್ಲ. ಓಡ್ತಾ ಓಡ್ತಾ ಹಾಡ್ತಿತ್ತಲ್ಲ, ಅದಕ್ಕೆ ಬಾಯಾರಿಕೆ ಆಯ್ತಂತೆ.

ದಾರಿಲೊಂದು ಗುಡಿಸಲು. ಅದರಲ್ಲೊಬ್ಬ ಬಡ ಮುದುಕಿ ಇದ್ದಳಂತೆ. ಕೋತಿ ಕುಡಿಯಲು ನೀರು ಕೇಳಿದಾಗ ಅವಳು ಕೊಟ್ಟಳಂತೆ. ಅಲ್ಲಿ ಮುದುಕಿ ಬೆಲ್ಲ ಇಲ್ಲದೆ ಪಾಯಸ ಮಾಡ್ತಿದ್ಲಂತೆ. ಕೋತಿ ಅವಳಿಗೆ ಬೆಲ್ಲ ಕೊಟ್ಟಿತಂತೆ. ಆಗ ಮುದುಕಿ, ಬೆಲ್ಲ ಕೊಟ್ಟೆ? ಕೊಂಚ ಹೊತ್ತಿರು. ಪಾಯಸ ಕೊಡ್ತೀನಿ ಅಂದಳಂತೆ.

ಕೊಟ್ಟಳ ಪಾಯಸ?

ಹೇಳೋವರೆಗೆ ತಡಿ. ಒಲೆ ಮೇಲೆ ಪಾಯಸ ಕುದೀತಿರೊವಾಗ ಅಜ್ಜಿ, ಕುದಿಯುವಷ್ಟರಲ್ಲಿ ಕೆರೆಗೆ ಹೋಗಿ ನೀರು ತಂದುಬಿಡುತ್ತೇನೆ ಎಂದು ಗಡಿಗೆ ತೆಗೆದುಕೊಂಡು ಹೊರಟಳಂತೆ. ಕೋತಿ ನೋಡ್ತು. ಕುಡಿಕೆ ತುಂಬ ಘಮಘಮ ಪಾಯಸ! ಅಜ್ಜಿ ಬರುವ ಮೊದಲೇ ಎಲ್ಲ ಕುಡಿದು ಓಡಬೇಕು ಅಂದುಕೊಂಡಿತಂತೆ.

ಕುಡೀತ?

ಎಲ್ಲಿ ಕುಡಿಯೋದು, ಬಾಯಿ ಹಾಕಿತಷ್ಟೇ. ಮೂತಿ ಚರ‍್ರನೆ ಸುಟ್ಟಿತು. ಕೋತಿ ಅರಚಿಕೊಂಡು ಅಲ್ಲಿಂದ ಓಡಿತು. ಈಗ ಕೋತಿ ಹಾಡಿದ್ದರೆ ಏನೆಂದು ಹಾಡ್ತಿತ್ತು ಹೇಳು.

ಮುಳ್ಳು ಹೋಯ್ತು ಕತ್ತಿ ಬಂತು ಡುಂಡುಂ
ಕತ್ತಿ ಹೋಯ್ತು ಗರಿ ಬಂತು ಡುಂಡುಂ
ಗರಿ ಹೋಯ್ತು ಬೆಲ್ಲ ಬಂತು ಡುಂಡುಂ
ಬೆಲ್ಲ ಹೋಯ್ತು ಪಾಯ್ಸ ಬಂತು ಡುಂಡುಂ
ಬಿಸಿ ಪಾಯ್ಸ ಮೂತಿ ಸುಟ್ಟಿತು ಡುಂಡುಂಡುಂ ■